# ತಾಲೂಕಿನಾದ್ಯಂತ ಮಕ್ಕಳ ಜಾಗೃತಿ ಸಂಸ್ಥೆ ಉತ್ತಮ ಸಮಾಜ ಮುಖಿ ಕಾರ್ಯ ಗಳನ್ನು ನಿರ್ವಹಿಸುತ್ತಿದೆ : ಗ್ರಾಮ ಪಂಚಾಯಿತಿ ಸದಸ್ಯೆ ಗುಲ್ನಾಜ್



ದೊಡ್ಡಬಳ್ಳಾಪುರ: ಪಾಲನ ಜೋಗಹಳ್ಳಿಯ ಅಂಗನವಾಡಿಯಲ್ಲಿ ಮಕ್ಕಳ ಜಾಗೃತಿ ಸಂಸ್ಥೆವತಿಯಿಂದ ಆಯೋಜಿಸಿದ್ದ ಅಂಗನವಾಡಿ ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ಕಥೆ ಪುಸ್ತಕ ನೀರಿನ ಬಾಟಲ್ ಗಳನ್ನು ವಿತರಿಸಿ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯೆ ಗುಲ್ನಾಜ್ ಅವರು ತಾಲೂಕಿನಾದ್ಯಂತ ಮಕ್ಕಳ ಜಾಗೃತಿ ಸಂಸ್ಥೆ ಉತ್ತಮ ಸಮಾಜ ಮುಖಿ ಕಾರ್ಯಗಳನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು.

ರಾಷ್ಟ್ರದಾದ್ಯಂತ ಎನ್‌ಜಿಒ ಸಂಸ್ಥೆಗಳ ಸೇವೆ ಅಪಾರವಾಗಿದ್ದು ಬಡ ವಿದ್ಯಾರ್ಥಿಗಳ ಶಿಕ್ಷಣ ಸೇವೆಗಳಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ ಎಂದರು ಉರ್ದು ಶಾಲಾ ಮುಖ್ಯ ಶಿಕ್ಷಕಿ ಶೈಲಜಾ ಮಾತನಾಡಿ ಸಂಸ್ಥೆವತಿಯಿಂದ ಅಂಗನವಾಡಿ ಕೇಂದ್ರಗಳಲ್ಲಿ ಬಾಣಂತಿಯರಿಗೆ ಮಕ್ಕಳ ಪಾಲನೆ ಬಗ್ಗೆ ವಾರಕ್ಕೊಮ್ಮೆ ನಡೆಸುವ ಮಕ್ಕಳ ತಾಯಂದಿರ ಸಭೆಯಿಂದ ಅರಿವು ಮೂಡಿಸುತ್ತಿರುವುದರಿಂದ ಮಕ್ಕಳು ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದರು ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಪಿಳ್ಳಮ್ಮ ಮತ್ತು ಮಕ್ಕಳ ಜಾಗೃತಿ ಸಂಸ್ಥೆ ಸೇವಾಪ್ರತಿನಿಧಿ ಎನ್.ಲತಾ ಗ್ರಾಮದ ಸ್ತ್ರೀ ಶಕ್ತಿ ಸಂಘದ ಮಹಿಳೆಯರು ಭಾಗವಹಿಸಿದ್ದರು.